**ದಿನಾಂಕ: 14.02.2023**
**ಓ.ಎಸ್ : 56/2017**
**ಪಿ ಡಬ್ಲ್ಯೂ : 1**

**ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು : 2 ರಿಂದ 4 ನೇ ಪ್ರತಿವಾದಿ ಪರ ವಕೀಲರಾದ ಶ್ರೀ ಬಿ.ಆರ್. ರವರಿಂದ :**

ಉಳಿದ ವಾದಿಗಳು ಮತ್ತು 4 ನೇ ವಾದಿಯ ವಾರಸುದಾರರು ಅವರ ಪರವಾಗಿ ಸಾಕ್ಷಿ ನುಡಿಯಲು ನನಗೆ ಅಧಿಕಾರ ಪತ್ರವನ್ನು ಕೊಟ್ಟಿರುತ್ತಾರ ಎಂದರೆ ಅವರು ಹೇಳಿರುತ್ತಾರೆ ಎಂದು ನುಡಿಯುತ್ತಾರೆ. ಅವರು ಯಾರೂ ನನಗೆ ಅಧಿಕಾರ ಪತ್ರವನ್ನು ಕೊಟ್ಟಿರುವುದಿಲ್ಲ ಮತ್ತು ಸಾಕ್ಷಿ ನುಡಿಯಲು ಹೇಳಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಅಕ್ಕ ರತ್ನಮ್ಮ 1 ನೇ ವಾದಿಯು ಪಿಯುಸಿ ವರೆಗೂ, ಇಂದ್ರಮ್ಮ 2 ನೇ ವಾದಿಯು 7 ನೇ ತರಗತಿವರೆಗೂ ಮತ್ತು ನಾನು ಎಸ್ ಎಸ್ ಎಲ್ ಸಿ ವರೆಗೂ ಓದಿರುತ್ತೇನೆ. 1 ನೇ ಪ್ರತಿವಾದಿ ಮತ್ತು ಮೃತ ಜಯಣ್ಣ ಗೌಡ ನನ್ನ ಅಣ್ಣಂದಿರು. 1 ನೇ ಪ್ರತಿವಾದಿಯು ಬಿ.ಎಸ್ಸಿ., ಮಾಡಿದ್ದಾರೆ ಮೃತ ಜಯಣ್ಣ ಗೌಡ ಬಿ. ಎ., ಓದಿರುತ್ತಾರೆ.

ದಾವೆಯನ್ನು ಹೂಡುವಾಗ ಮಾಹಿತಿಯನ್ನು ನಾವೇ ವಕೀಲರಿಗೆ ಕೊಟ್ಟಿರುತ್ತೇವೆ. ದಾವೆಯನ್ನು ಹೂಡುವ ಕಾಲಕ್ಕೆ ನನ್ನ ಅಣ್ಣ 1 ನೇ ಪ್ರತಿವಾದಿ ತೀರಿಕೊಂಡಿದ್ದರು ಎಂದರೆ ಸಾಕ್ಷಿಯು ನಂತರ ತೀರಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ದಾವೆಯನ್ನು ಹೂಡುವ ಕಾಲಕ್ಕೆ 1ನೇ ಪ್ರತಿವಾದಿಯು ತೀರಿಕೊಂಡಿದ್ದರೂ ಕೂಡ ನಂತರ ತೀರಿಕೊಂಡಿರುತ್ತಾರೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಗಳ ವಿವರಗಳನ್ನು ಹೇಳಲು ಆಗುತ್ತದೆಯಾ ಎಂದರೆ ಸಾಕ್ಷಿಯು ಹೇಳಲು ಆಗುವುದಿಲ್ಲ ಎಂದು ನುಡಿಯುತ್ತಾರೆ. ದಾವೆಯಲ್ಲಿ ಚೆಕ್ ಬಂದಿಯನ್ನು ಯಾರು ಹೇಳಿರುತ್ತಾರೆ ಎಂದರೆ ಸಾಕ್ಷಿಯು ನಾವೇ ಜಮೀನಿನ ಬಳಿ ಹೋಗಿ ನೋಡಿಕೊಂಡು ಚೆಕ್ ಬಂದಿಯನ್ನು ಬರೆಸಿರುತ್ತೆವೆ ಎಂದು ನುಡಿಯುತ್ತಾರೆ. ದಾವಾ ಸ್ವತ್ತಿನ ಚೆಕ ಬಂದಿ ಯನ್ನು ನಮೂದು ಮಾಡಿರುತ್ತೇವೆ ಎಂದರೆ ಸರಿಯಲ್ಲ.

ನನ್ನ ತಂದೆ ತಮ್ಮೇಗೌಡ ಉಃ ತಿಮ್ಮೇಗೌಡ ರವರು ತೀರಿಕೊಂಡು ಇಲ್ಲಿಗೆ ಸುಮಾರು 45 ವರ್ಷ ಆಗಿರುತ್ತದೆಯಾ ಎಂದರೆ ಸಾಕ್ಷಿಯು 30-35 ವರ್ಷ ಆಗಿದೆ ಎಂದು ನುಡಿಯುತ್ತಾರೆ. ನನ್ನ ತಂದೆ ತೀರಿಕೊಂಡ ದಿನಾಂಕ ಮತ್ತು ವರ್ಷ ನೆನಪಿರುವುದಿಲ್ಲ. ನನ್ನ ತಂದೆ ತೀರಿಕೊಂಡು ಇಲ್ಲಿಗೆ ಸುಮಾರು 47 ವರ್ಷ ಆಗಿದೆ ಎಂದರೆ ಸಾಕ್ಷಿಯು ಯಾವಾಗ ತೀರಿಕೊಂಡಿರುತ್ತಾರೆ ಎಂದು ನೆನಪಿರುವುದಿಲ್ಲ ಎಂದು ನುಡಿಯುತ್ತಾರೆ. ನನ್ನ ತಾಯಿಯು ನನ್ನ ತಂದೆ ತೀರಿಕೊಂಡ 7-8 ವರ್ಷದ ನಂತರ ತೀರಿಕೊಂಡಿರುತ್ತಾರೆ.

ನನ್ನ ತಂದೆ ತಾಯಿಗೆ ಒಟ್ಟು 5 ಜನ ಹೆಣ್ಣು ಮಕ್ಕಳು ಮತ್ತು ಇಬ್ಬರು ಗಂಡು ಮಕ್ಕಳು ಎಂದರೆ ಸರಿ. 5 ಜನ ಹೆಣ್ಣು ಮಕ್ಕಳಲ್ಲಿ ಭಾರತಿ ಮತ್ತು 4 ನೇ ಪ್ರತಿವಾದಿ ವಿಜಯಮ್ಮ ತೀರಿಕೊಂಡಿರುತ್ತಾರೆ ಎಂದರೆ ಸರಿ. ದಾವೆಯನ್ನು ಹೂಡುವ ಕಾಲಕ್ಕೆ ಭಾರತಿ ರವರು ತೀರಿಕೊಂಡಿರುತ್ತಾರೆ ಎಂದರೆ ಸರಿ. ಭಾರತಿ ತೀರಿಕೊಂಡಿದ್ದು ಅವರ ವಾರಸುದಾರರನ್ನು ಪಾರ್ಟಿ ಮಾಡಿರುವುದಿಲ್ಲ ಎಂದರೆ ಸಾಕ್ಷಿಯು ಅವರ ಗಂಡ 2 ನೇ ಮದುವೆಯಾಗಿದ್ದು ಅವರಿಗೆ ಮಕ್ಕಳು ಇರಲಿಲ್ಲ ಹಾಗಾಗಿ ಪಾರ್ಟಿ ಮಾಡಿರುವುದಿಲ್ಲ ಎಂದು ನುಡಿಯುತ್ತಾರೆ. ನಂತರ 11 ನೇ ಪ್ರತಿವಾದಿಯಾಗಿ ಸೇರಿಸಿರುತ್ತೇನೆ ಎಂದರೆ ಸರಿ.

ನನ್ನ ತಂದೆ ಇದ್ದಾಗ ಒಟ್ಟು ಕುಟುಂಬದ ಆಸ್ತಿಗಳನ್ನು ಅವರೇ ನೋಡಿಕೊಳ್ಳುತ್ತಿದ್ದರು ಎಂದರೆ ಸರಿ. ಎಲ್ಲ ಮಕ್ಕಳ ವಿವಾಹವನ್ನು ನನ್ನ ತಂದೆಯೇ ಮಾಡಿದ್ದರು ಎಂದರೆ ಸಾಕ್ಷಿಯು ವಾದಿ 1 ರಿಂದ 3 ರವರ ಮದುವೆಯನ್ನು ನನ್ನ ತಂದೆ ತಾಯಿ ಮಾಡಿರುತ್ತಾರೆ. ನನ್ನ ತಂದೆ ತಾಯಿ ತೀರಿಕೊಂಡ ನಂತರ ಇಬ್ಬರು ತಂಗಿಯರ ಮದುವೆಯನ್ನು ನನ್ನ ಇಬ್ಬರು ಅಣ್ಣಂದಿರು ಸೇರಿ ಮಾಡಿರುತ್ತಾರೆ ಎಂದರೆ ಸರಿ. ನನ್ನ ತಂದೆ ತೀರಿಕೊಂಡ ನಂತರ ಸುಮಾರು 42 ವರ್ಷದ ಹಿಂದೆ ನನ್ನ 1 ನೇ ಪ್ರತಿವಾದಿ ಮತ್ತು ನನ್ನ ಇನ್ನೊಬ್ಬ ಅಣ್ಣ ಜಯಣ್ಣ ಗೌಡ ಬಾಯಿ ಮಾತಿನ ಮೂಲಕ ವಿಭಾಗ ಮಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. 1974-75 ರಲ್ಲಿ ಅವರ ಭಾಗಕ್ಕೆ ಬಂದ ಆಸ್ತಿಗಳನ್ನು ಖಾತೆ ಬದಲಾವಣೆ ಮಾಡಿಕೊಂಡಿರುತ್ತಾರೆ ಎಂದರೆ ಸಾಕ್ಷಿಯು ನಮಗೆ ಆ ಬಗ್ಗೆ ಗೊತ್ತಿರಲಿಲ್ಲ ಎಂದು ನುಡಿಯುತ್ತಾರೆ. 1974-75 ರಿಂದ ನನ್ನ ಅಣ್ಣಂದಿರು ಅವರ ಭಾಗದ ಆಸ್ತಿಯನ್ನು ಖಾತೆ ಬದಲಾವಣೆ ಮಾಡಿಕೊಂಡು ಪ್ರತ್ಯೇಕವಾಗಿ ಸ್ವಾಧೀನಾನುಭವದಲ್ಲಿ ಇದ್ದರು ಎಂದರೆ ನಮಗೆ ಗೊತ್ತಿರಲಿಲ್ಲ. ನನ್ನ ಅಣ್ಣಂದಿರುಪ್ರತ್ಯೇಕವಾಗಿ ವಾಸವಾಗಿದ್ದರು ಎಂದರೆ ಸರಿ. ನನ್ನ ಅಣ್ಣಂದಿರ ಕಾಲಾನಂತರ

ಅವರವರ ಹೆಂಡತಿಯವರ ಹೆಸರಿಗೆ ಖಾತೆ ಬದಲಾವಣೆ ಆಗಿರುತ್ತದೆ ಎಂದರೆ ಆ ಬಗ್ಗೆ ನಮಗೆ ಗೊತ್ತಿಲ್ಲ. ನನ್ನ ಅಣ್ಣಂದಿರು ಬದುಕಿದ್ದ ಕಾಲದಲ್ಲಿ ಅವರ ಭಾಗದ ಆಸ್ತಿಗಳನ್ನು ಅನುಭವಿಸಿಕೊಂಡು ಮಾಲಿಕರಾಗಿ ಸ್ವಾಧೀನಾನುಭವದಲ್ಲಿ ಇದ್ದರು ಎಂದರೆ ನಮಗೆ ಗೊತ್ತಿರಲಿಲ್ಲ. ನನ್ನ ಅಣ್ಣಂದಿರ ಕಾಲಾನಂತರ ಅವರವರ ಹೆಂಡತಿಯವರ ಹೆಸರಿಗೆ ಖಾತೆ ಬದಲಾವಣೆ ಪ್ರತ್ಯೇಕವಾಗಿ ವಾಸವಾಗಿದ್ದರು ಎಂದರೆ ಸಾಕ್ಷಿಯು ಪ್ರತ್ಯೇಕವಾಗಿ ವಾಸವಾಗಿರುತ್ತಾರೆ ಎಂದು ನುಡಿಯುತ್ತಾರೆ. 2 ರಿಂದ 4 ನೇ ಪ್ರತಿವಾದಿಗಳು ಐಟಂ ನಂ: 124/2 ಎ 1 ರಲ್ಲಿ 16 ಗುಂಟೆಯನ್ನು 10 ನೇ ಪ್ರತಿವಾದಿಗೆ ಮಾರಾಟ ಮಾಡಿರುತ್ತಾರೆ ಎಂದರೆ ನಮಗೆ ಗೊತ್ತಿರಲಿಲ್ಲ. ಸರ್ವೆನಂ: 17/8 ರಲ್ಲಿ ಒಂದು ಐಟಂ ನ್ನು 5 ನೇ ಪ್ರತಿವಾದಿಗೆ ಮಾರಾಟ ಮಾಡಿರುತ್ತಾರೆ ಎಂದರೆ ನಮಗೆ ಗೊತ್ತಿರಲಿಲ್ಲ. 5 ಮತ್ತು 10 ನೇ ಪ್ರತಿವಾದಿಗಳು ಖರೀದಿ ಮಾಡಿದ ಆಸ್ತಿಗಳಲ್ಲಿ ಸಂಪೂರ್ಣ ಮಾಲಿಕರಾಗಿ ಸ್ವಾಧಿನಾನುಭವದಲ್ಲಿ ಇದ್ದು ಖಾತೆ ಬದಲಾವಣೆ ಮಾಡಿಕೊಂಡಿರುತ್ತಾರೆ ಎಂದರೆ ನಮಗೆ ಈ ಬಗ್ಗೆ ಗೊತ್ತಿರುವುದಿಲ್ಲ.

1 ನೇ ಪ್ರತಿವಾದಿಯ ವಾರಸುದಾರರು ಮತ್ತು 2 ರಿಂದ 4 ನೇ ಪ್ರತಿವಾದಿಗಳು ದಾವೆಯಲ್ಲಿ ಏನು ತಕರಾರು ಹಾಕಿರುತ್ತಾರ ಎಂದು ತಿಳಿದುಕೊಂಡಿರುತ್ತೀನಾ ಎಂದರೆ ತಿಳಿದುಕೊಂಡಿರುವುದಿಲ್ಲ. ತಕರಾರಿನ ಬಗ್ಗೆ ತಿಳಿದುಕೊಳ್ಳಲು ತೊಂದರೆ ಇತ್ತಾ ಎಂದರೆ ತೊಂದರೆ ಇರಲಿಲ್ಲ. ದಾವೆ ಹಾಕುವೆ ಕಾಲಕ್ಕೆ ಆರ್ ಟಿ ಸಿ ಗಳು ಯಾರ ಯಾರ ಹೆಸರಿನಲ್ಲಿ ಬರುತ್ತಿವೆ ಎಂದು ತಿಳಿದುಕೊಂಡಿರುತ್ತೀನಾ ಎಂದರೆ ತಿಳಿದುಕೊಂಡಿರುತ್ತೇನೆ. ದಾವೆಯನ್ನು ಹಾಕುವ ಕಾಲಕ್ಕೆ ಆರ್ ಟಿ ಸಿ ಗಳಲ್ಲಿ 75-76 ನೇ ಇಸವಿಯಲ್ಲೇ ನನ್ನ ಅಣ್ಣಂದಿರ ಹೆಸರಿಗೆ ಖಾತೆ ಬದಲಾವಣೆ ಆಗಿರುವ ಬಗ್ಗೆ ತಿಳಿದುಕೊಂಡಿರುತ್ತೆನಾ ಎಂದರೆ ತಿಳಿದುಕೊಂಡಿರುವುದಿಲ್ಲ. ನಾನಾಗಲೀ ಅಥವಾ ಉಳಿದ ಸಹೋದರಿಯರು ನನ್ನ ಅಣ್ಣಂದಿರ ಹೆಸರಿನಲ್ಲಿ ಇರುವ ರೆವಿನ್ಯೂ ದಾಖಲೆಯನ್ನು ಎಲ್ಲಾದರೂ ಪ್ರಶ್ನೆ ಮಾಡಿರುತ್ತೀರಾ ಎಂದರೆ ಮಾಡಿರುವುದಿಲ್ಲ. ನನ್ನ ಅಣ್ಣಂದಿರು ತೀರಿಕೊಂಡ ನಂತರ ಅವರ ಹೆಂಡತಿಯರ ಹೆಸರಿನಲ್ಲಿ ಇರುವ ಖಾತೆಗಳನ್ನು ಎಲ್ಲಾದರೂ ಪ್ರಶ್ನೆ ಮಾಡಿರುತ್ತೀರಾ ಎಂದರೆ ಮಾಡಿರುವುದಿಲ್ಲ. ನನ್ನ ಅಣ್ಣಂದಿರು ಖಾತೆ ಬದಲಾವಣೆ ಮಾಡಿ ಪ್ರತ್ಯೇಕವಾಗಿ ವ್ಯವಹಾರ ಮಾಡುತ್ತಿದ್ದ ಬಗ್ಗೆ ಎಲ್ಲಾದರೂ ಪ್ರಶ್ನೆ ಮಾಡಿರುತ್ತೀರಾ ಎಂದರೆ ಸಾಕ್ಷಿಯು ಪ್ರಶ್ನೆ ಮಾಡಿರುವುದಿಲ್ಲ ಏಕೆಂದರೆ ಗೊತ್ತಿರಲಿಲ್ಲ. ನನ್ನ ಅಣ್ಣಂದಿರ ಹೆಂಡತಿಯರು ಅವರ ಹೆಸರಿಗೆ ಖಾತಾ ಬದಲಾವಣೆ ಮಾಡಿ ಪರಭಾರೆ ಮಾಡಿದ್ದನ್ನು

ಎಲ್ಲಾದರೂ ಪ್ರಶ್ನೆ ಮಾಡಿರುತ್ತೀರಾ ಎಂದರೆ ಪ್ರಶ್ನೆ ಮಾಡಿರುವುದಿಲ್ಲ ಏಕೆಂದರೆ ಗೊತ್ತಿರಲಿಲ್ಲ. ನನ್ನ ತಂದೆ ತೀರಿಕೊಂಡ ನಂತರ 47 ವರ್ಷದ ಹಿಂದೆ ನನ್ನ ಅಣ್ಣಂದಿರು ವಿಭಾಗಮಾಡಿಕೊಂಡಿದ್ದು ನಾವು ಯಾರೂ ಒಟ್ಟು ಕುಟುಂಬದ ಸದಸ್ಯರಾಗಿ ಸ್ವಾದೀನಾನುಭವದಲ್ಲಿ ಇರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಗಳು ಒಟ್ಟು ಕುಟುಂಬದ ಆಸ್ತಿಗಳು ಅಲ್ಲ ಎಂದರೆ ಸರಿಯಲ್ಲ. ನನ್ನ ತಂದೆ ತೀರಿಕೊಂಡ ನಂತರ ನನ್ನ ಇಬ್ಬರು ಅಣ್ಣಂದಿರು ಮನೆಯ ವ್ಯವಹಾರವನ್ನು ನೋಡಿಕೊಳ್ಳುತಿದ್ದರು. ಅವರಿಬ್ಬರೂ ವಿಭಾಗ ಆಗಿರಲಿಲ್ಲ ಎಂದು ತೋರಿಸಲು ದಾಖಲೆ ಹಾಜರು ಮಾಡಿರುತ್ತೇನಾ ಎಂದರೆ ಹಾಜರು ಮಾಡಿರುವುದಿಲ್ಲ. ವಾಸದ ಮನೆಗಳು ಒಟ್ಟು 2 ಇದ್ದು ಒಂದು ಊರಿನ ಒಳಗೆ ಇನ್ನೊಂದು ಊರಿನ ಹೊರಗಡೆ ಇದೆ. ಸದರಿ ಮನೆಗಳನ್ನು ದಾವೆಯಲ್ಲಿ ಸೇರಿಸಿರುವುದಿಲ್ಲ ಎಂದರೆ ಸರಿಯಲ್ಲ. ದಾವೆಯಲ್ಲಿ ಎಷ್ಟನೇ ಐಟಂ ಮನೆಗಳು ಎಂದು ಹೇಳುವುದಕ್ಕೆ ಆಗುತ್ತದಾ ಎಂದರೆ ಹೇಳಲು ಆಗುವುದಿಲ್ಲ ಎಂದು ನುಡಿಯುತ್ತಾರೆ. ಮನೆಗಳನ್ನು ದಾವೆಯಲ್ಲಿ ಉದ್ದೇಶಪೂರ್ವಕವಾಗಿ ಸೇರಿಸಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ತಂದೆ ತಾಯಿ ತೀರಿಕೊಂಡ ನಂತರ ನನ್ನ ಅಣ್ಣಂದಿರು ನಮ್ಮನ್ನು ಮನೆಗೆ ಕರೆಸಿ ಚೆನ್ನಾಗಿ ನೋಡಿಕೊಳ್ಳುತ್ತಿದ್ದರು ಎಂದರೆ ಸಾಕ್ಷಿಯು ಅವರು ಕರೆಸಿರುವುದಿಲ್ಲ ಎಂದು ನುಡಿಯುತ್ತಾರೆ. ನನ್ನ ತಂಗಿಯರ ಮತ್ತು ನನ್ನ ಅಣ್ಣಂದಿರ ಮದುವೆಗಳಿಗೆ ನಾವು ಭಾಗವಹಿಸಿರುತ್ತೆವೆ ಎಂದರೆ ಸರಿ. ನನ್ನ ತಂದೆ ತಾಯಿ ನಾವು 3 ಜನ ವಾದಿಗಳಿಗೆ ಆರ್ಥಿಕವಾಗಿ ಚೆನ್ನಾಗಿ ಇರುವ ಕುಟುಂಬಕ್ಕೆ ಮದುವೆ ಮಾಡಿಕೊಟ್ಟಿರುತ್ತಾರೆ ಎಂದರೆ ಸಾಕ್ಷಿಯು ಗಂಡನ ಮನೆಯವರೇ ಮದುವೆ ಖರ್ಚನ್ನು ವಹಿಸಿಕೊಂಡು ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ನನ್ನ ತಂದೆ ತಾಯಿಗೆ ಪಿತ್ರಾರ್ಜಿತವಾಗಿ ಎಷ್ಟು ಆಸ್ತಿ ಇತ್ತು ಎಂದರೆ ಅದು ಹೇಳಲು ಆಗುವುದಿಲ್ಲ. ನಮ್ಮ ಊರಿಗೆ ನನ್ನ ತಂದೆ ಮನೆಯವರು ಶ್ರೀಮಂತರು ಎಂದರೆ ಸರಿ. ನನ್ನ ತಂದೆ ಬದುಕಿದ್ದಾಗ ಅವರು ನಮ್ಮ ಊರಿನ ಯಜಮಾನರಾಗಿದ್ದು ನಂತರ ನನ್ನ ಅಣ್ಣಂದಿರು ಊರಿನ ಯಜಮಾನರಾಗಿದ್ದರು ಎಂದರೆ ಸರಿ. 1 ನೇ ವಾದಿಯ ಗಂಡ ಇಂಜಿನಿಯರ್ ಓದಿದ್ದರು ಎಂದರೆ ಸರಿ. 2 ನೇ ವಾದಿಯ ಗಂಡ ದೊಡ್ಡ ಜಮೀನ್ದಾರರು ಎಂದರೆ ಸರಿ. ನನ್ನ ಗಂಡ ಚೌಡಯ್ಯ ನಮ್ಮ ತಾಲ್ಲೂಕಿನ ಮುಖಂಡರು ಎಂದರೆ ಸರಿ. ನಾನು ಕೂಡ ತಾಲ್ಲೂಕು ಪಂಚಾಯ್ತಿಯ ಅಧ್ಯಕ್ಷೆಯಾಗಿದ್ದೆ ಎಂದರೆ ಸರಿ. ನನ್ನ ತಂಗಿ ವಿಜಯಮ್ಮ ಮಂಡ್ಯ ಸಿಟಿಯಲ್ಲಿ ಶ್ರೀಮಂತ ಕುಟುಂಬಕ್ಕೆ ಮದುವೆ ಮಾಡಿಸಿರುತ್ತಾರೆ ಎಂದರೆ ಸಾಕ್ಷಿಯುಅವರ ಗಂಡ ಸರ್ಕಾರಿ ಅಧಿಕಾರಿಯಾಗಿದ್ದರು

ಎಂದು ನುಡಿಯುತ್ತಾರೆ. ಕೊನೆಯ ತಂಗಿ ಭಾರತಿ ರವರನ್ನು ಇಂಜಿನಿಯರ್ ಅಧಿಕಾರಿಗೆ ಕೊಟ್ಟು ಮದುವೆ ಮಾಡಿರುತ್ತಾರೆ ಎಂದರೆ ಸರಿ. 5 ಜನ ಹೆಣ್ಣು ಮಕ್ಕಳನ್ನು ಶ್ರೀಮಂತ ಕುಟುಂಬಗಳಿಗೆ ಮದುವೆ ಮಾಡಿಕೊಟ್ಟು ಸುಖಕರವಾಗಿ ಜೀವನ ನಡೆಸುತ್ತಿದ್ದೆವು ಎಂದರೆ ಸರಿ. ನನ್ನ ಅಣ್ಣಂದಿರು ನಮ್ಮನ್ನು ಚೆನ್ನಾಗಿ ನೋಡಿಕೊಂಡು ಅವರ 45-50 ವರ್ಷಕ್ಕೆ ಮದುವೆ ಮಾಡಿಕೊಂಡರು ಎಂದರೆ ಸರಿ. ಈಗಲೂ ಕೂಡ ನನ್ನತಂದೆಯ ಕುಟುಂಬಕ್ಕೆ ಗ್ರಾಮದಲ್ಲಿ ಒಳ್ಳೆಯ ಹೆಸರು ಇದೆ ಎಂದರೆ ಸರಿ. ನನ್ನ ತಂದೆ ತೀರಿಕೊಂಡ ನಂತರ ನನ್ನ ಅಣ್ಣಂದಿರಿಗೆ ನಾವೇ ಹೆಣ್ಣು ಮಕ್ಕಳು ನಾವು ಚೆನ್ನಾಗಿದ್ದೇವೆ ನೀವಿಬ್ಬರೂ ಭಾಗ ಮಾಡಿಕೊಳ್ಳಿ ಎಂದು ಹೇಳಿರುತ್ತೇವೆ ಎಂದರೆ ಸರಿಯಲ್ಲ. 45 ವರ್ಷದ ಹಿಂದೆ ನನ್ನ ಅಣ್ಣಂದಿರು ಭಾಗ ಆಗಿರುವ ಬಗ್ಗೆ ನಮಗೆ ಗೊತ್ತಿದ್ದು ಅವರು ಪ್ರತ್ಯೇಕವಾಗಿ ಸ್ವಾಧೀನದಲ್ಲಿ ಇರುವ ಬಗ್ಗೆ ಗೊತ್ತಿರುತ್ತದೆ ಎಂದರೆ ಸರಿಯಲ್ಲ.

ನನ್ನ ಅಣ್ಣಂದಿರು ತೀರಿಕೊಂಡ ನಂತರ ನಾವು ನನ್ನ ಅತ್ತಿಗೆಯರ ಜೊತೆ ಚೆನ್ನಾಗಿರುತ್ತೇವೆ ಎಂದರೆ ಸರಿಯಲ್ಲ. ನಾವು ಮತ್ತು ನನ್ನ ಅತ್ತಿಗೆಯವರು ನನ್ನ ಅಣ್ಣಂದಿರು ತೀರಿಕೊಂಡ ನಂತರ ನಮ್ಮ ಸಂಬಂಧ ಚೆನ್ನಾಗಿರುವುದಿಲ್ಲ. ದಿಃ 20.02.2016 ರಲ್ಲಿ ಬಳ್ಳೆಕೆರೆಯ ಮನೆಯ ಎದುರುಗಡೆ ನ್ಯಾಯಕ್ಕೆ ಸೇರಿದ್ದು ಸದರಿ ನ್ಯಾಯಕ್ಕೆ ನಮ್ಮ ಊರಿನಿಂದ ತಳಗವಾದಿಯ ಕೃಷ್ಣ, ರಮೇಶ, ಬಳ್ಳೇಕೆರೆಯ ನಾಗರಾಜು, ಹೊಸಗಾವಿಯ ಶಿವರಾಜು ಸೇರಿದ್ದರು. ನಾನು ಹೇಳಿದ ಹಾಗೆ ಮಾತುಕತೆಗೆ ಸೇರಿರುವುದಿಲ್ಲ ಎಂದರ ಸರಿಯಲ್ಲ. ನನ್ನ ಅಣ್ಣಂದಿರು ತೀರಿಕೊಂಡ ನಂತರ ನನ್ನ ಅತ್ತಿಗೆಯವರು ನಮ್ಮನ್ನು ಸರಿಯಾಗಿ ನೋಡಿಕೊಳ್ಳುತ್ತಿಲ್ಲ ಹಾಗಾಗಿ 45 ವರ್ಷದ ಹಿಂದೆ ನನ್ನ ಅಣ್ಣಂದಿರು ಭಾಗ ಆಗಿರುವ ಬಗ್ಗೆ ಗೊತ್ತಿದ್ದರಾ ಕೂಡ ಪ್ರತಿವಾದಿಗಳಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ದಾವೆ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಗಳಲ್ಲಿ ನಮಗೆ ಭಾಗ ಇಲ್ಲದೇ ಇದ್ದರೂ ಕೂಡ ಸುಳ್ಳು ದಾವೆ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**6 ರಿಂದ 9 ನೇ ಪ್ರತಿವಾದಿಗಳು ಪಾಟೀ ಸವಾಲಿಗೆ ಸಮಯ ಕೋರಿದ್ದು ಸಮಯ ನೀಡಲಾಯಿತು.**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ಮದ್ದೂರು.